**OS: 115-15** **DW-1**

**ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 04.11.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ಶ್ರೀ K H H ವಕೀಲರಿಂದ ಃ**

9. ನಾನು ದಾವಾ ಆಸ್ತಿ ಖರೀದಿಸುವ ಮೊದಲು ಅದನ್ನು ನೋಡಲು ಗೆದ್ದನಗೌಡ ಮತ್ತು ಇನ್ನೊಬ್ಬರ ಜೊತೆಗೆ ಹೋಗಿದ್ದೆ. ಅದನ್ನು ಖರೀದಿಸುವ ಮೊದಲು ಆ ಆಸ್ತಿ ಬಗ್ಗೆ ಇರುವ ಡ- ಉತಾರೆ, ಮುಟೇಶನ್ ವಗೈರೆ ದಾಖಲೆಗಳನ್ನು ನೋಡಿ ಖರೀದಿಸಿದ್ದೇನೆ. ಅದನ್ನು ಖರೀದಿಸುವ ಮೊದಲು ಆ ಆಸ್ತಿ ಬಗ್ಗೆ ಯಾವುದೇ ತಂಟೆ-ತಕರಾರು ಅಥವಾ ದಾವೆ ಇತ್ತಾ ಅಂದರೆ ಯಾವುದೇ ತಂಟೆ-ತಕರಾರು ಅಥವಾ ದಾವೆ ಇರಲಿಲ್ಲ. ದಾವೆ ಇಲ್ಲದಿರುವುದನ್ನು ಖಚಿತಪಡಿಸಿಕೊಂಡ ನಂತರವೇ ಅದನ್ನು ಖರೀದಿಸಿದ್ದೇನೆ. ಅದನ್ನು ಖರೀದಿಸುವ ಮೊದಲು ದಿನಪತ್ರಿಕೆಯಲ್ಲಿ ಸಾರ್ವಜನಿಕ ನೋಟಿಸು ಕೊಟ್ಟ ಬಗ್ಗೆ ಈಗ ನನಗೆ ನೆನಪಿಲ್ಲ. ನಾನು ಆ ಆಸ್ತಿ ಖರೀದಿಸುವ ಕಾಲಕ್ಕೆ ಆ ಆಸ್ತಿ ಬಗ್ಗೆ ಅಸಲು ದಾವೆ ನಂಃ 217/10 ನೇದ್ದು ಚಾಲ್ತಿ ಇತ್ತು ಮತ್ತು ಆಸ್ತಿ ಬಗ್ಗೆ ತಂಟೆ-ತಕರಾರುಗಳು ಇದ್ದವು ಅಂದರೆ ಸರಿಯಲ್ಲ. ಆ ಅಸಲು ದಾವೆಯಲ್ಲಿ ನಮಗೂ ಸಹ ಪಾರ್ಟಿ ಮಾಡುವಂತೆ ನಾನು ಅರ್ಜಿ ಹಾಕಿದ್ದೆ ಅಂದರೆ ಸರಿ. ಆ ಆಸ್ತಿ ಬಗ್ಗೆ ಬಹಳಷ್ಟು ತಂಟೆ-ತಕರಾರುಗಳು ಇದ್ದರು ಸಹಿತ ನಾನು ಗಜಾನನ ಅಣ್ವೇಕರ ರವರ ಜೊತೆ ಶಾಮೀಲಾಗಿ ಖರೀದಿ ಪತ್ರವನ್ನು ಸೃಷ್ಟಿ ಮಾಡಿಕೊಂಡಿದ್ದೇನೆ ಅಂದರೆ ಸರಿಯಲ್ಲ. ಗಜಾನನ ಅಣ್ವೇಕರ ಯಾರು ಎಂದು ನನಗೆ ಗೊತ್ತಿಲ್ಲ. ಅವರು ಏನು ಕೆಲಸ ಮಾಡುತ್ತಾರೆಂದು ಸಹ ನನಗೆ ಗೊತ್ತಿಲ್ಲ. ಈ ವ್ಯವಹಾರದಲ್ಲಿ ಅವನ ಪಾತ್ರ ಏನೂ ಇಲ್ಲ. ನಾನು ನನ್ನ ಸಾಕ್ಷ್ಯವನ್ನು ನನ್ನ ಪರವಾಗಿ ಮತ್ತು ಪ್ರತಿವಾದಿ-5 ಮತ್ತು 6 ರ ಪರವಾಗಿ ಸಹ ಹೇಳುತ್ತಿದ್ದೇನೆ.

10. ನಾನು ಈ ದಾವೆಯಲ್ಲಿ ಯಾವುದಾದರೂ ಜಿ ಪಿ ಎ ಯನ್ನು ಹಾಜರಪಡಿಸಿದ್ದೀರಾ ಅಂದರೆ ಅದನ್ನು ನೋಡಿ ನಾನು ಹೇಳಬಲ್ಲೆ. ನಾವು 3 ಜನ ಖರೀದಿದಾರರು ದಾವಾ ಆಸ್ತಿಯನ್ನು ಮೂಲ ಮಾಲಿಕರಿಂದ ಖರೀದಿಸಿದ್ದೇವೆ, ಆದರೆ ಜಿ ಪಿ ಎ ಯನ್ನು ಹೋಲ್ಡರ ರವರಿಂದ ಖರೀದಿ ಮಾಡಿಲ್ಲ. ನನಗೆ ಮಾರುತಿ ರಾಯ್ಕರ ಇವರು ಗೊತ್ತು, ಅವರು 4 ಮತ್ತು 5 ಹಾಗೂ ಬಸವ್ವ ಇವರ ಮುಕ್ತಾರನಾಮೆದಾರಕರಾಗಿದ್ದಾರೆ.

ಆ ಮಾರುತಿ ರಾಯ್ಕರ ಇವರು ಆ ಶಿಬಾಯವ್ವ ರುದ್ರಗೌಡ ಮತ್ತು ಬಸವ್ವ ಇವರಿಗೆ ಯಾವ ರೀತಿ ಸಂಬಂಧ ಅಥವಾ ಪರಿಚಯ ಇದ್ದರು ಎಂದು ನಾನು ತಿಳಿದುಕೊಂಡಿಲ್ಲ. ಆ 3 ಜನರು ಲಿಂಗಾಯತ ಜಾತಿಗೆ ಸೇರಿದವರು ಅಂದರೆ ಸರಿ. ಆ ರಾಯ್ಕರ ಇವರು ಪತ್ತಾರ ಜಾತಿಗೆ ಸೇರಿದವರು ಅಂದರೆ ಸರಿ. ಆ ಮಾರುತಿ ರಾಯ್ಕರ ಇವರು ಎಲ್ಲಿರುತ್ತಾರೆ ಮತ್ತು ಏನು ಕೆಲಸ ಮಾಡುತ್ತಾರೆ ಎಂದು ನಾನು ತಿಳಿದುಕೊಂಡಿಲ್ಲ. ಆ 3 ಜನರು ಆ ಮಾರುತಿ ರಾಯ್ಕರ ಇವರಿಗೆ ಏಕೆ ಜಿ ಪಿ ಎ ಮಾಡಿಕೊಟ್ಟಿದ್ದಾರೆಂದು ನಾನು ಕೇಳಿಲ್ಲ, ಆದರೆ ಅವರು ಆಸ್ತಿಯನ್ನು ಖರೀದಿ ಮಾಡಿಕೊಡಲು ಆ ಜಿ ಪಿ ಎ ಕೊಟ್ಟಿದ್ದರು ಮತ್ತು ಉಳಿದ ಮಾಲಿಕರು ಖುದ್ದಾಗಿ ಬಂದು ಖರೀದಿ ಪತ್ರಕ್ಕೆ ಸಹಿ ಹಾಕಿದ್ದರು. ನನ್ನ ಪ್ರಕಾರ ಆ 3 ಜನರು ಅಂದರೆ ಶಿಬಾಯವ್ವ, ರುದ್ರಗೌಡ ಮತ್ತು ಬಸವ್ವ ಇವರು ಮಾತ್ರ ಆ ಜಿ ಪಿ ಎ ಯನ್ನು ಬರೆದುಕೊಟ್ಟಿದ್ದಾರೆ ಅಂದರೆ ಸರಿ. ಅವರು ಆ ಜಿ ಪಿ ಎ ಮಾಡಿ ಕೊಟ್ಟೇ ಇಲ್ಲ ಅಂದರೆ ಸರಿಯಲ್ಲ, ಆದರೆ ಆ ಜಿ ಪಿ ಎ ನೋಂದ ಆಗಿದೆ. ಗಜಾನನ ಅಣ್ವೇಕರ ಆ ಜಿ ಪಿ ಎ ಯನ್ನು ಸೃಷ್ಟಿಸಿದ್ದಾನೆ ಅಂದರೆ ಸರಿಯಲ್ಲ.

11. ನಾವು ಚೆಕ್ ಮೂಲಕ ಹಣ ಕೊಟ್ಟರೆ ಆ ಚೆಕ್ಕ ನಗಧೀಕರಣವಾಗಿದಿಯೋ ಅಥವಾ ಇಲ್ಲವೋ ಎಂದು ನಮಗೆ ಗೊತ್ತಾಗುತ್ತದೆ. ಆ ಬಗ್ಗೆ ಬ್ಯಾಂಕ್ ಮೂಲಕ ದಾಖಲೆ ಪಡೆಯಬಹುದು ಅಂದರೆ ಸರಿ. ನನ್ನ ಮುಖ್ಯ ವಿಚಾರಣೆಯಲ್ಲಿ ತೋರಿಸಿದ ಕ್ರಮಸಂಖ್ಯೆಃ 1 ರಿಂದ 48 ಚೆಕ್ಕುಗಳು ನಗಧೀಕರಣವಾದ ಬಗ್ಗೆ ನನ್ನ ಖಾತೆ ಉತಾರೆ ಹಾಜರಪಡಿಸಿಲ್ಲ ಅಂದರೆ ಸರಿ. ಆ ಖಾತೆ ಉತಾರೆ ಹಾಜರಪಡಿಸಲು ನಮಗೆ ಯಾವುದೇ ತೊಂದರೆ ಇಲ್ಲ ಅಂದರೆ ಸರಿ. ಕ್ರಮಸಂಖ್ಯೆಃ 21 ರಿಂದ 25 ರವರೆಗಿನ ಹೆಚ್ ಡಿ ಎಫ್ ಸಿ ಚೆಕ್ಕುಗಳು ನಗಧೀಕರಣವಾಗಿಯೇ ಇಲ್ಲ ಅಂದರೆ ಸರಿಯಲ್ಲ. ಅದೇ ರೀತಿ ಉಳಿದ ಚೆಕ್ಕುಗಳನ್ನು ಗಜಾನನ ಅಣ್ವೇಕರ ಇವರು ನನ್ನ ಕಡೆಯಿಂದ ಪಡೆದು ತಾನೆ ನಗಧೀಕರಣ ಮಾಡಿಕೊಂಡಿದ್ದಾನೆ ಅಂದರೆ ಸರಿಯಲ್ಲ.

12. ಈಗ ನನಗೆ ತೋರಿಸಲಾದ ಅಸಲು ದಾವೆ ನಂಃ 217/10 ರೋಜನಾಮೆಯಲ್ಲಿ ದಿಃ 18.8.2016 ರಂದು ಮಾನ್ಯ ನ್ಯಾಯಾಲಯ ಒಂದು ಆದೇಶ ಮಾಡಿ ಅಪೀಲು ಅವಧಿ ಮುಗಿಯವವರೆಗೆ ಆಸ್ತಿಯನ್ನು ಹಸ್ತಾಂತರ ಮಾಡದಂತೆ ಪ್ರತಿವಾದಿಗಳಿಗೆ ನಿರ್ಬಂಧಕಾಜ್ಞೆ ಮಾಡಿತ್ತು ಅಂದರೆ ಸರಿ. **ಆ ದಾಖಲೆಯನ್ನು ಸಾಕ್ಷಿಯು ಒಪ್ಪಿಕೊಂಡ ಕಾರಣ ಅದನ್ನು ನಿ.ಎಸ್-1 ಎಂದು ಗುರುತಿಸಲಾಯಿತು.**

ಆ ಡಿಕ್ರಿಯ ಮೇಲೆ ಮೇಲ್ಮನವಿ ಸಲ್ಲಿಸಿದ ಆರ್ ಎ ನಂಃ 187/16 ನೇದ್ದರ ಡಿಕ್ರಿ ಈಗ ನನಗೆ ತೋರಿಸಲಾಗುತ್ತಿದೆ ಅಂದರೆ ಸರಿ. ಅದು ಖುರ್ಷಿದ್ ಇವರು ದಿಃ 25.8.2016 ರಂದು ಸಲ್ಲಿಸಿದ ಮೇಲ್ಮನವಿ ಅಂದರೆ ಸರಿ. **ಈಗ ಆ ಡಿಕ್ರಿಯನ್ನು ನಿಎಸ್-2 ಎಂದು ಗುರುತಿಸಲಾಯಿತು.** ಅದರಲ್ಲಿ ನಾವು 3 ಜನ ಖರೀದಿದಾರರು ನಮ್ಮನ್ನು ಪಕ್ಷಗಾರರನ್ನಾಗಿ ಮಾಡಲು ಮಧ್ಯಂತರ ಅರ್ಜಿ-3 ನ್ನು ಹಾಕಿದ್ದೆವು ಮತ್ತು ಅದು ವಜಾ ಆಯಿತು ಅಂದರೆ ನನಗೆ ಗೊತ್ತಿಲ್ಲ. ಆ ಅಪೀಲು ಚಾಲ್ತಿಯಲ್ಲಿದ್ದಾಗ ಮತ್ತು ನಾವು ಹಾಕಿದ ಅರ್ಜಿ ಇನ್ನು ಇತ್ಯರ್ಥವಾಗದ ಸಮಯಕ್ಕೆ ನಾವು ದಿಃ 4.10.2016 ರಂದು ಖರೀದಿ ಪತ್ರ ಮಾಡಿಕೊಂಡಿದ್ದೇವೆ ಅಂದರೆ ಸರಿಯಲ್ಲ, ನಾವು ಖರೀದಿ ಪತ್ರ ಮಾಡಿಕೊಂಡಿದ್ದು ದಿಃ 21.10.2010 ರಂದು ಇದೆ. ದಿಃ 21.10.2010 ರಂದು ಖರೀದಿ ಪತ್ರವನ್ನು ನೋಂದ ಮಾಡಲು Present ಮಾಡಲಾಗಿತ್ತು, ಆದರೆ ನೋಂದ ಆಗಿರಲಿಲ್ಲ ಅಂದರೆ ನ್ಯಾಯಾಲಯದಲ್ಲಿ ಸ್ಟೇ ಇದ್ದ ಕಾರಣ ದಾಖಲೆ ಬಿಡುಗಡೆ ಮಾಡಿರಲಿಲ್ಲ.

13. ದಾವಾ ಆಸ್ತಿಯು ಪಾಟೀಲ ರವರ ಮನೆತನಕ್ಕೆ ಸೇರಿದ ಆಸ್ತಿ ಅಂದರೆ ಸರಿ. ಖರೀದಿ ಪತ್ರವನ್ನು ಯಾರು ಬರೆದುಕೊಟ್ಟಿದ್ದಾರೆ ಅಂದರೆ ಸುಮಾರು 16 ಜನ ಬರೆದುಕೊಟ್ಟಿದ್ದಾರೆ. ಅವರ ಬಗ್ಗೆ ಮಾಹಿತಿ ಇದಿಯಾ ಅಂದರೆ ಸಾಕ್ಷಿಯು ಈಗ ಸಾಕಷ್ಟು ವರ್ಷಗಳು ಗತಿಸಿದ ಕಾರಣ ನನಗೆ ಅವರೆಲ್ಲರ ಬಗ್ಗೆ ನಿಖರವಾಗಿ ಹೇಳಲು ಬರುವುದಿಲ್ಲ. ಆದರೆ ಖರೀದಿ ಪತ್ರ ತೋರಿಸಿ ಅವರ ಹೆಸರು ಹೇಳಿದರೆ ನಾನು ನಿಖರವಾಗಿ ಹೇಳಬಹುದು. ಅದರಲ್ಲಿ ಅಂದರೆ ನಿಪಿ.8 ರಿಂದ 11 ಖರೀದಿ ಪತ್ರಗಳಲ್ಲಿ ತೋರಿಸಿದ ಮಾರಾಟಗಾರ ನಂಃ 8 ರಿಂದ 11 ಇವರು ಪಾಟೀಲ ರವರ ಕುಟುಂಬಕ್ಕೆ ಸೇರಿದ ವ್ಯಕ್ತಿಗಳಲ್ಲ ಅಂದರೆ ಸರಿಯಲ್ಲ. ಆದರೆ ಅವರು ಖರೀದಿ ಪತ್ರ ಮಾಡಿಕೊಟ್ಟಿದ್ದಾರೆ. ಅವರು ಪಾಟೀಲ ಮನೆತನಕ್ಕೆ ಯಾವ ರೀತಿ ಸೇರಿದವರೆಂದು ನನಗೆ ಗೊತ್ತಿಲ್ಲ. ಪಾಟೀಲ ರವರ ಮನೆತನಕ್ಕೆ ಸೇರದ ವ್ಯಕ್ತಿಗಳನ್ನು ಸೇರಿಸಿಕೊಂಡು ಗಜಾನನ ಅಣ್ವೇಕರ ರವರ ಜೊತೆ ಶಾಮೀಲಾಗಿ ಆ ಖರೀದಿ ಪತ್ರ ಸೃಷ್ಟಿಸಿದ್ದೇವೆ ಅಂದರೆ ಸರಿಯಲ್ಲ. ಅವರೆಲ್ಲರಿಗೂ ಪ್ರತಿಫಲದ ಹಣವನ್ನು ಕೊಡಲಾಗಿದೆ ಎಂದು ಖರೀದಿ ಪತ್ರಗಳಲ್ಲಿ ಬರೆಯಲಾಗಿದೆ. ಅವರೆಲ್ಲರೂ ದಾವಾ ಆಸ್ತಿಗೆ ಸಂಬಂಧ ಇರದಿದ್ದರೂ ಸಹಿತ ಅವರಿಗೆ ಹಣ ಕೊಟ್ಟಿದ್ದೇವೆಂದು ಗಜಾನನ ಅಣ್ವೇಕರ ಇವರ ಮುಖಾಂತರ ಖೊಟ್ಟಿ ಖರೀದಿ ಪತ್ರಗಳನ್ನು ಮಾಡಿಕೊಂಡಿದ್ದೇವೆ ಅಂದರೆ ಸರಿಯಲ್ಲ.

ನಾವು ಗಜಾನನ ಅಣ್ಣೇಕರ ರವರ ಜೊತೆ ಮಿಲಾಪಿಯಾಗಿ ಅವರು ಹೇಳಿದ ಹಾಗೆ ಈ ಖರೀದಿ ಪತ್ರಗಳನ್ನು ಸೃಷ್ಟಿಸಿಕೊಂಡಿದ್ದೇವೆ ಅಂದರೆ ಸರಿಯಲ್ಲ. ಆ ನಂತರ ವಾದಿಯರು ನಮಗೆ ನೋಟಿಸು ಕೊಟ್ಟಿದ್ದರು ಅಂದರೆ ನನಗೆ ನೆನಪಿಲ್ಲ. ಆ ಬಗ್ಗೆ ನನಗೆ ಈಗ ತೋರಿಸಲಾದ ನೋಟಿಸು 3 ಅಂಚೆ ರಶೀದಿಗಳು ಮತ್ತು 3 ಅಂಚೆ ಸ್ವೀಕೃತಿ ಪತ್ರಗಳು ಅಂದರೆ ಸರಿ. ಸಾಕ್ಷಿಯು ಆ ನೋಟಿಸಿನ ಸ್ಥಳ ಪ್ರತಿಯನ್ನು ಗುರುತಿಸಿದ ಕಾರಣ ನಿಪಿ.19 ಎಂದು, 3 ಅಂಚೆ ರಶೀದಿಗಳನ್ನು ನಿಪಿ.19(ಎ) ಎಂದು, 3 - ಅಂಚೆ ಸ್ವೀಕೃತಿ ಪತ್ರಗಳನ್ನು ನಿಪಿ.19(ಬಿ) ಎಂದು ಗುರುತಿಸಲಾಯಿತು. ಆ ನೋಟಿಸಿಗೆ ನಾವು ಉತ್ತರ ಕೊಟ್ಟಿಲ್ಲ ಅಂದರೆ ನಾನು ಆ ಬಗ್ಗೆ ನೋಡಿ ಹೇಳಬೇಕಾಗುತ್ತದೆ. ಆ ನೋಟಿಸಿನಲ್ಲಿ ವಾದಿಯರು ತಮಗೆ ಅಣ್ವೇಕರ ಎನ್ನುವವರು ಮೋಸ ಮಾಡಿದ್ದಾರೆ ಮತ್ತು ನಾವು ಅಣ್ಣೇಕರ ಇವರಿಗೆ ಕೊಟ್ಟ 3,40,000/- ರೂ. ಗಳ ಹಣವನ್ನು ವಾಪಸ್ ಕೊಡುವುದಾಗಿ ತಿಳಿಸಿದ್ದರು ಅಂದರೆ ಸರಿಯಲ್ಲ.

14. ನಾವು ಆ ಆಸ್ತಿಯನ್ನು ಖರೀದಿಸುವ ಮೊದಲು ಅದನ್ನು ನೋಡಿಯೇ ಇಲ್ಲ ಮತ್ತು ನಮಗೆ ಅದರ ಮಾಲಿಕರ ಪರಿಚಯವೇ ಇಲ್ಲ ಆದರೂ ಸಹಿತ ಗಜಾನನ ಅಣ್ವೇಕರ ರವರ ಜೊತೆ ಶಾಮೀಲಾಗಿ ಖೊಟ್ಟಿ ಖರೀದಿ ಪತ್ರಗಳನ್ನು ಮಾಡಿಕೊಂಡಿದ್ದೇವೆ ಅಂದರೆ ಸರಿಯಲ್ಲ.

15. ಆರು ಮತ್ತು 7 ನೇ ವಾದಿಗಳು 2 ಪ್ರತಿವಾದಿಯ ಮಕ್ಕಳು ಅಂದರೆ ನನಗೆ ಗೊತ್ತಿಲ್ಲ. ನಿಪಿ.8 ರಿಂದ 11 ಖರೀದಿ ಪತ್ರಗಳಲ್ಲಿ 6 ಮತ್ತು 7 ನೇ ವಾದಿಗಳು ಪಕ್ಷಗಾರರು ಅಲ್ಲ ಅಂದರೆ ನಾನು ನನಗೆ ಕನ್ನಡ ಓದಲು ಬರುವುದಿಲ್ಲ, ಆ ಕಾರಣ ನನಗೆ ನಿಖರವಾಗಿ ಹೇಳಲು ಬರುವುದಿಲ್ಲ. ಅವರಿಬ್ಬರಿಗೂ ಯಾವುದೇ ಪ್ರತಿಫಲದ ಹಣ ಕೊಟ್ಟಿಲ್ಲವೆಂದರೆ ನಾನು ದಾಖಲೆಗಳನ್ನು ನೋಡಿ ಹೇಳಬಲ್ಲೆ. ಸಾಮಾನ್ಯವಾಗಿ ದಾಖಲೆಗಳಿಗೆ ಪರಿಚಯವಿದ್ದವರನ್ನು ಸಾಕ್ಷಿಗಾರರನ್ನಾಗಿ ಮಾಡುತ್ತಾರೆ ಅಂದರೆ ಹೌದು, ಆದರೆ ಪರಿಚಯವಿಲ್ಲದವರು ಸಿಗದ ಕಾಲಕ್ಕೆ ಸಿಕ್ಕಂತಹ ವ್ಯಕ್ತಿಗಳನ್ನು ಸಾಕ್ಷಿಗಳನ್ನಾಗಿ ಹಾಕುತ್ತಾರೆ ಎಂದು ಸಾಕ್ಷಿಯು ಉತ್ತರಿಸುತ್ತಾರೆ. ನಮ್ಮ ಖರೀದಿ ಪತ್ರಗಳಿಗೆ ಗಜಾನನ ಅಣ್ವೇಕರ ಇವರು ಸಾಕ್ಷಿದಾರರು ಒಂದು ಎಂದು ಸಹಿ ಮಾಡಿದ್ದಾರೆ ಅಂದರೆ ಅವರು ಮಾಲಿಕರ ಪರವಾಗಿ ಸಾಕ್ಷಿ ಎಂದು ಸಹಿ ಮಾಡಿದ್ದಾರೆ.

ಸಾಕ್ಷಿಯು ಇನ್ನೊಬ್ಬರು ಸಹ ಸಾಕ್ಷಿ ಎಂದು ಸಹಿ ಹಾಕಿದ್ದಾರೆಂದು ಉತ್ತರಿಸುತ್ತಾರೆ. ಆ ಗಜಾನನ ಅಣ್ವೇಕರ ಇವರು ನಮ್ಮ ಜೊತೆ ಶಾಮೀಲಾಗಿ ವಾದಿಯರಿಗೆ ಮೋಸ ಮಾಡಿದ್ದಾರೆ ಅಂದರೆ ಸರಿಯಲ್ಲ. ಆ ಖರೀದಿ ಪತ್ರಗಳ ಮೂಲಕ ನಮಗೆ ಆಸ್ತಿಯಲ್ಲಿ ಯಾವುದೇ ಹಕ್ಕು ಬಂದಿಲ್ಲ ಅಂದರೆ ಸರಿಯಲ್ಲ.

**ಮರು ವಿಚಾರಣೆ : ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಹಾಗೂ ಜೆ.ಎಂ.ಎಫ್.ಸಿ. ಹುಬ್ಬಳ್ಳಿ.